# ಶ್ರೀಧರ ಬಳಗಾರ



ವಿಶಿಷ್ಟ ವಸ್ತುವಿನ ಕಥೆ–ಕಾದಂಬರಿಗಳ ಮೂಲಕ ಗುರುತಿಸಿಕೊಂಡವರು ಶ್ರೀಧರ ಬಳಗಾರ. ಮನುಷ್ಯರ ಭಾವಪಲ್ಲಟಗಳನ್ನು, ಬದುಕಿನ ಸ್ಥಿತ್ಯಂತರಗಳನ್ನು ದಾಖಲಿಸುವ ಅವರ ಕತೆಗಳು ಓದುಗರನ್ನು ಆಪ್ತವಾಗಿ ತಟ್ಟುತ್ತವೆ, ಮುಟ್ಟುತ್ತವೆ. ಕತೆ ಹೇಳುವ ಕ್ರಮದಲ್ಲೇ ಬದುಕಿನ ಹಲವು ಸ್ತರಗಳನ್ನು ದರ್ಶಿಸುವುದು ಅವರ ಬರವಣಿಗೆಯ ರೀತಿಯಾಗಿದೆ. ಅವರ ಕಥಾನಕ ಹಲವು ನಿಗೂಢಗಳನ್ನು ತನ್ನಲ್ಲಿ ಇಟ್ಟುಕೊಂಡು ಓದುಗರನ್ನು ಕಾಡುವ ಶಕ್ತಿಯನ್ನು ಹೊಂದಿದೆ. ಕುಶಲ ಕಸುಬುದಾರಿಕೆಯ ಈ ಲೇಖಕ ಸೃಷ್ಟಿಸಿದ ಕಥಾಲೋಕ ಅತ್ಯಂತ ದಟ್ಟ ಹಾಗೂ ಅನನ್ಯವಾದದ್ದು.

'ಅಧೋಮುಖ', 'ಮುಖಾಂತರ', 'ಇಳೆ ಎಂಬ ಕನಸು', 'ಒಂದು ಫೋಟೊದ ನೆಗೆಟಿವ್' ಅವರ ಕಥಾ ಸಂಕಲನಗಳು. 'ಕೇತಕಿಯ ಬನ', 'ಆಡುಕಳ' ಅವರ ಕಾದಂಬರಿಗಳು. 'ರಥ ಬೀದಿ', 'ಕಾಲ ಪಲ್ಲಟ' ಅವರ ಅಂಕಣ ಬರಹಗಳ ಪುಸ್ತಕಗಳಾಗಿವೆ.

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದ ಬಳಗಾರ ಶ್ರೀಧರ ಅವರ ಊರು. ಪ್ರಸ್ತುತ ಕುಮಟೆಯ ಕಮಲಾ ಬಾಳಿಗ ಶಿಕ್ಷಣ ಮಹಾವಿದ್ಯಾಲಯದಲ್ಲಿ ಅಧ್ಯಾಪಕರು.

ನೆನಪು: ಒಬ್ಬ ಬಡ ತಾಯಿ; ಒಂಟಿ ಮನೆ; ಸುತ್ತಲೂ ಗವ್ವನೆಯ ಕತ್ತಲ ಕಾಡು; ಅವಳಿಗೊಬ್ಬ ಹಟಮಾರಿ ಮಗ; ಅವಳೂ ಹೀಗೆಯೇ ರೊಟ್ಟಿ ಸುಡುತ್ತಿದ್ದಳು; ಅಂಚು ಹರಿದಿದೆ, ಕತ್ತಿದೆ ಎಂದು ತಾಟಿನಲ್ಲಿರಿಸಿದ ರೊಟ್ಟಿಯನ್ನು ಬಿಸಾಕಿದ; ರೇಗಿದ ತಾಯಿ ಮಗನ ಕೈ ರಟ್ಟೆ ಹಿಡಿದು ಹಿತ್ತಲ ಬಾಗಿಲಿಂದ ಹೊರ ದಬ್ಬಿ ಕದ ಹಾಕಿದಳು; ಸ್ವಲ್ಪ ಹೊತ್ತಿನ ನಂತರ ರಂಪಾಟ ನಿಲ್ಲಿಸಿದ ಹುಡುಗ, "ಮಿಣಿ ಮಿಣಿ ಕಣ್ಣು ಬಂತೆ ಹರಿದ ರೊಟ್ಟಿಯೇ ಸಾಕೆ ಬೇಗನೆ ಬಾಗಿಲ ತೆಗಿಯೆ" ಎಂದು ಚೀರಿದನಂತೆ. ಬಾಗಿಲ ತೆಗೆಯಲಿಲ್ಲ; ಮಗನ ಅಳು ನಿಂತು ಗಾಬರಿಯಾಗಿ ಹೊರಗೆ ಬಂದು ನೋಡಿದರೆ ಹುಲಿಯ ಹೆಜ್ಜೆ, ರಕ್ತದ ಹುಂಡು... ಹೃದಯ ಕರಗಿಸಿದ ಈ ಕಥೆ ನನ್ನ ಬಹು ಕಾಡಿದೆ. ಕಾಲೇಜಿನ ದಿನಗಳಲ್ಲಿ ಅನಂತಮೂರ್ತಿಯವರ 'ಎಂದೆಂದೂ ಮುಗಿಯದ ಕಥೆ'ಯಲ್ಲಿ ಈ ಕಥೆಯನ್ನು ಓದಿದಾಗ ನಾನೇ ಬರೆಯಬೇಕಾಗಿದ್ದ ಕಥೆಯಾಗಿತ್ತಲ್ಲ ಎಂದು ಆಸೆಯಾಗಿತ್ತು.

ಅನಂತಮೂರ್ತಿಯವರ 'ಪ್ರಶ್ನೆ' ಸಂಕಲನ ಓದಿದಾಗ ಅಲ್ಲಿ ನಡೆದುದ್ದೆಲ್ಲ ನನ್ನ ಮನೆಯೊಳಗೆ ಜರುಗಿದ ವಿಷಾದಮಯ ಸಂಗತಿಗಳು ಎಂದು ಅನಿಸಿತು. ನಾನು ಸಣ್ಣವನಿದ್ದಾಗ ನಮ್ಮ ಮನೆಗೆ ಒಬ್ಬ ಬಿಳಿ ಸೀರೆಯ ಬೋಳು ತಲೆಯ ಮಧ್ಯವಯಸ್ಕ